**ಕುವೈತ್‌ನ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದ ಪ್ರಧಾನ ಮಂತ್ರಿಗಳು**

ಡಿಸೆಂಬರ್ 22, 2024

ಕುವೈತ್‌ನ ಅಮೀರ್ ಗೌರವಾನ್ವಿತ ಶೇಖ್ ಮೆಶಾಲ್ ಅಲ್-ಅಹಮದ್ ಅಲ್-ಜಬೇರ್ ಅಲ್-ಸಬಾಹ್ ಅವರು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ಕುವೈತ್‌ನ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿಯಾದ ಮುಬಾರಕ್ ಅಲ್-ಕಬೀರ್ ಪುರಸ್ಕಾರವನ್ನು ನೀಡಿ ಗೌರವಿಸಿದರು. ಕುವೈತ್ ಪ್ರಧಾನ ಮಂತ್ರಿ ಗೌರವಾನ್ವಿತ ಶೇಖ್ ಅಹಮದ್ ಅಲ್-ಅಬ್ದುಲ್ಲಾ ಅಲ್-ಅಹಮದ್ ಅಲ್-ಸಬಾಹ್ ಅವರು ಕೂಡ ಈ ಸಂದರ್ಭಕ್ಕೆ ಸಾಕ್ಷಿಯಾದರು.

2.ಪ್ರಧಾನ ಮಂತ್ರಿಗಳು ಭಾರತ ಮತ್ತು ಕುವೈತ್ ನಡುವಿನ ದೀರ್ಘಾವಧಿಯ ಸ್ನೇಹಕ್ಕೆ, ಕುವೈತ್‌ನಲ್ಲಿರುವ ಭಾರತೀಯ ಸಮುದಾಯಕ್ಕೆ ಮತ್ತು ಭಾರತದ 1.4 ಬಿಲಿಯನ್ ಜನರಿಗೆ ತನ್ನ ಪ್ರಶಸ್ತಿಯನ್ನು ಸಮರ್ಪಿಸಿದರು.

3.43 ವರ್ಷಗಳ ನಂತರ ಕುವೈತ್‌ಗೆ ಭಾರತದ ಪ್ರಧಾನ ಮಂತ್ರಿಗಳ ಈ ಐತಿಹಾಸಿಕ ಭೇಟಿಯ ಮೇಲೆ ಪ್ರಶಸ್ತಿ ಪ್ರದಾನ ಸಮಾರಂಭವು ಸಂದರ್ಭಕ್ಕೆ ವಿಶೇಷ ಅರ್ಥವನ್ನು ನೀಡಿತು.

4. ಈ ಪ್ರಶಸ್ತಿಯನ್ನು 1974 ರಲ್ಲಿ ಆರಂಭಿಸಲಾಯಿತು ಮತ್ತು ನಂತರ ಆಯ್ದ ಜಾಗತಿಕ ನಾಯಕರಿಗೆ ನೀಡಲಾಗುತ್ತಿದೆ.

**ಕುವೈತ್**

**ಡಿಸೆಂಬರ್ 22, 2024**